**ಪಾಠ–7** **ಆಗಸ್ಟ್ 7–13**

# ವಿಶ್ರಾಂತಿ, ಸಂಬಂಧಗಳು ಮತ್ತು ಸ್ವಸ್ಥತೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆದಿಕಾಂಡ 42:7–20, ಮತ್ತಾಯ 25:41–46, ಆ.ಕಾಂಡ 42:21–24; ಆ.ಕಾಂಡ 45:1–15, ಲೂಕ 23:34, ಆ.ಕಾಂಡ 50:15–21.

**ಸ್ಮರಣವಾಕ್ಯ : "ನೀವು ನನ್ನನ್ನು ಹಾಗೆ ಮಾರಿದ್ದಕ್ಕಾಗಿ ವ್ಯಸನಪಟ್ಟು ದುಃಖಿಸಬೇಡಿರಿ. ಪ್ರಾಣಸಂರಕ್ಷಣೆಗಾಗಿ ದೇವರು ನನ್ನನ್ನು ನಿಮ್ಮ ಮುಂದೆ ಕಳುಹಿಸಿದನು"** (ಆದಿಕಾಂಡ 45:5).

ವ್ಯಕ್ತಿಯೊಬ್ಬನು ಒಂದು ಹೆಂಗಸಿನ ಮೇಲೆ ಲೈಂಗಿಕ ಹಲ್ಲೆಯ ಆರೋಪವನ್ನು ಹೊತ್ತಿದ್ದಾನೆ. ಆ ಹೆಂಗಸು ಪೊಲೀಸ್ ಠಾಣೆಯ ಅಪರಾಧಿಗಳ ಮಧ್ಯದಿಂದ ಅವನನ್ನು ಗುರುತಿಸುತ್ತಾಳೆ. ಅಪರಾಧಿಯ ಸಾಕ್ಷ್ಯವು ಸಂಶಯಾತ್ಮಕವಾಗಿದ್ದರೂ ಆ ಹೆಂಗಸು ಹಠಮಾರಿಯಾಗಿ ಜಾನಿಯು ನಿಜವಾಗಿಯೂ ಅಪರಾಧಿ ಎಂದಳು.

ಜಾನಿಯು ಸೆರೆಮನೆಗೆ ಹೋದನು, 14 ವರ್ಷಗಳು ತಾನು ಮಾಡದ ತಪ್ಪಿಗೆ ಸೆರೆಮನೆಯಲ್ಲಿ ಕಳೆದನು. ಡಿ.ಎನ್.ಎ. ಪರೀಕ್ಷೆಯು ಅಪರಾಧಿಯು ಆತನಲ್ಲವೆಂದು ದೃಢಪಡಿಸಿದಾಗ ಜೋನಳಿಗೆ ತನ್ನ ಭಯಂಕರವಾದ ತಪ್ಪಿನ ಅರಿವಾಯ್ತು.

ಆಕೆಯು ಜಾನಿಯನ್ನು ಸೆರೆಮನೆಯಿಂದ ಬಿಡುಗಡೆ ಹೊಂದಿದ ಮೇಲೆಭೇಟಿ ಮಾಡಲು ನಿರ್ಧರಿಸಿದಳು. ಇಷ್ಟು ವರ್ಷಗಳ ಕಾಲ ತನ್ನ ಜೀವನ ಹಾಳಾಗಲು

---

* **ಆಗಸ್ಟ್ 14ನೇ ಸಬ್ಬತ್ತಿಗೆ ಈ ಪಾಠವನ್ನು ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ಕಾರಣವಾಗಿದ್ದ ಹೆಂಗಸು ಮುಖದ ಎದುರಿಗೆ ಬಂದು ನಿಂತಾಗ ಈ ಮನುಷ್ಯನಿಗೆ ಏನಾಗಬೇಕು?

ಆಕೆಯು ಒಂದು ಕೋಣೆಯಲ್ಲಿ ಆತನ ಬರುವಿಕೆಗಾಗಿ ಕಾಯುತ್ತಿದ್ದಳು. ಆತನು ಒಳ ಬಂದಾಗ ಇಬ್ಬರೂ ಕಣ್ಣಲ್ಲಿ ಕಣ್ಣಿಟ್ಟು ನೋಡಿದರು. ಜೋನಳು ತಡೆಯಲಾಗದೆ ಅತ್ತುಬಿಟ್ಟಳು.

"ಜಾನಿಯು ಬಾಗಿ ನನ್ನ ಕೈಗಳನ್ನು ಹಿಡಿದು ನನ್ನನ್ನು ನೋಡಿಕೊಂಡು 'ನಿನ್ನನ್ನು ಕ್ಷಮಿಸಿದ್ದೇನೆ' ಎಂದು ಹೇಳಿದನು. ನನಗೆ ಅದನ್ನು ನಂಬುವುದಕ್ಕಾಗಲಿಲ್ಲ. ಇದೋ, ನಾನು ಬಹಳವಾಗಿ ದ್ವೇಷಿಸುತ್ತಿದ್ದೆನು. ಈತನು ಸಾಯಬೇಕು ಎಂದು ಬಯಸುತ್ತಿದ್ದೆನು. ಆದಾಗ್ಯೂ ಈವಾಗ ಈತನು ನಾನು ಅವನಿಗೆ ಮಾಡಿದೆಲ್ಲವನ್ನೂ ಮರೆತು ಕ್ಷಮಿಸಿದ್ದೇನೆ ಎನ್ನುತ್ತಿದ್ದಾನೆ? ಆವಾಗಲೇ ಕೃಪೆಯೆಂದರೆ ಏನು ಎಂಬುದನ್ನು ಅರ್ಥಮಾಡಿಕೊಳ್ಳ ತೊಡಗಿದೆ. ನಂತರವೇ ನಾನು ಸ್ವಸ್ಥಳಾದೆ ಮತ್ತು ನಿಜವಾದ ವಿಶ್ರಾಂತಿ ಹೊಂದಿದೆ. ಈ ವಾರ ನಾವು ಕ್ಷಮಾಪಣೆಯ ಬಗ್ಗೆ ನೋಡುತ್ತೇವೆ. ಅದು ನಮ್ಮ ಸಮಾಧಾನ ಕಳೆದುಕೊಂಡ ಹೃದಯಗಳಿಗೆ ಏನು ಮಾಡುತ್ತದೆ ನೋಡೋಣ.

**ಭಾನುವಾರ** **ಆಗಸ್ಟ್ 8**

## ಹಿಂದೆ ನಡೆದುದನ್ನು ಎದುರಿಸುವುದು

ಅಂತಿಮವಾಗಿ ಯೋಸೇಫನಿಗೆ ಎಲ್ಲಾ ವಿಷಯಗಳು ಒಂದು ಸರಿಯಾದ ದಿಕ್ಕಿನಲ್ಲಿ ಸಾಗಿದವು. ಒಂದು ದೊಡ್ಡ ಸಮಯ. ಆತನು ಸೆರೆಮನೆಯಿಂದ ಬಿಡುಗಡೆ ಆದದ್ದು ಮಾತ್ರವಲ್ಲ. ಫರೋಹನ ಕನಸಿನ ಅರ್ಥವನ್ನು ಹೇಳಿದ ಮೇಲೆ ಅವನನ್ನು ಸರ್ವಾಧಿಕಾರಿಯನ್ನಾಗಿ ಮಾಡಲಾಯ್ತು (ಆದಿಕಾಂಡ 41ನೇ ಅಧ್ಯಾಯ). ಆತನಿಗೆ ಮದುವೆಯಾಗಿ ಇಬ್ಬರು ಮಕ್ಕಳಾದರು (ಆ.ಕಾಂಡ 41:50–52). ಐಗುಪ್ತ ದೇಶದ ದವಸ ಧಾನ್ಯದ ಉಗ್ರಾಣಗಳೆಲ್ಲ ಭರ್ತಿಯಾದವು, ಮುಂತಿಳಿಸಿದ ಬರಗಾಲವು ಬಂತು. ಒಂದು ದಿನ ಯೋಸೇಫನ ಅಣ್ಣಂದಿರು ಅವನ ಹತ್ತಿರ ಕಾಣಿಸಿಕೊಂಡರು. ಯೋಸೇಫನು ತನ್ನ ಅಣ್ಣಂದಿರನ್ನು ಪ್ರಥಮವಾಗಿ ಭೇಟಿಯಾದುದನ್ನು ಆದಿಕಾಂಡ 42:7–20 ವಚನಗಳನ್ನು ಓದಿರಿ. ಸುದೀರ್ಘ ಸಂದರ್ಭ. ತನ್ನ ಪ್ರಥಮ ಭೇಟಿಯಲ್ಲಿ ಯೋಸೇಫನು ಏನು ಮಾಡಲು ಯತ್ನಿಸಿದನು?

______________________________

ಯೋಸೇಫನಿಗೆ ತನ್ನನ್ನು ಸಮರ್ಥಿಸಿಕೊಳ್ಳದೆ ತನ್ನ ಅಣ್ಣಂದಿರ ಮೇಲೆ ಸೇಡು ತೀರಿಸಿಕೊಳ್ಳುವ ಅಧಿಕಾರವಿತ್ತು. ಸೇಡು ತೀರಿಸಿಕೊಳ್ಳುವುದಕ್ಕಿಂತ ಆತನು ತನ್ನ ಕುಟುಂಬದ ಸದಸ್ಯರ ಮೇಲೆ ಕಾಳಜಿ ವಹಿಸಿದನು. ಆತನು ತಂದೆಯ ಬಗ್ಗೆ ಚಿಂತಿಸಿದನು. ಆತನು ಇನ್ನೂ ಬದುಕಿರುವನೆ ಸಮಸ್ಯೆ ತುಂಬಿದ ಕುಟುಂಬವು ಅದರ ಯಜಮಾನನಿಲ್ಲದೆ ಹೇಗೆ ಉಳಿಯುತ್ತದೆ? ತನ್ನ ತಮ್ಮನಾದ ಬೆಂಜಮಿನ್ ವಿಷಯವೇನು? ತನ್ನ ತಂದೆಯ ಕಿರಿಯ ಮಗ, ಮುದ್ದಿನ ಮಗ, ಈವಾಗ ಯೋಸೇಫನ ಸ್ಥಾನದಲ್ಲಿ ಅಣ್ಣಂದಿರ ದ್ವೇಷಕ್ಕೆ ತುತ್ತಾಗಿರುವನೇ? ಹೀಗೆ ತನ್ನ ಕುಟುಂಬಕ್ಕೆ ಅಪಾಯಕಾರಿಯಾದ ಸದಸ್ಯರನ್ನೆಲ್ಲಾ ಸರಿಯಾಗಿ ಗಮನಿಸಿಕೊಳ್ಳುವ ಸಂದರ್ಭ, ಆತನು ಅದನ್ನೇ ಮಾಡಿದನು.

ನಮ್ಮ ಸಂಬಂಧಗಳಿಗೆ ಸತ್ಯವೇದದ ನಿಯಮಗಳನ್ನು ಪಾಲಿಸುವುದು ಎಂದರೆ ನಾವು ನಿಂದೆಗಳನ್ನು ಒಪ್ಪಿಕೊಳ್ಳಬೇಕು ಎಂದು ನೆನಸಬಾರದು. ನಮ್ಮಲ್ಲಿ ಪ್ರತಿಯೊಬ್ಬರೂ ದೇವರ ದೃಷ್ಟಿಯಲ್ಲಿ ಅಮೂಲ್ಯರಾಗಿದ್ದೇವೆ. ಯೇಸುಕ್ರಿಸ್ತನ ನಮ್ಮ ಅಂತಿಮ ಬೆಲೆಯನ್ನು ಪ್ರತಿಯೊಬ್ಬರಿಗೂ ಶಿಲುಬೆಯ ಮೇಲೆ ತೆತ್ತಿದ್ದಾನೆ. ಯೇಸುಕ್ರಿಸ್ತನು ಇತರರಿಗೆ ಆದ ನಿಂದೆ ಮತ್ತು ತಿರಸ್ಕಾರಗಳನ್ನು ಏಕೆ ವೈಯಕ್ತಿಕವಾಗಿ ತೆಗೆದುಕೊಳ್ಳುತ್ತಿದ್ದನು? ಓದಿರಿ 25:41–46.

ನಾವೆಲ್ಲರೂ ಕ್ರಿಸ್ತನ ರಕ್ತದಿಂದ ಕೊಳ್ಳಲ್ಪಟ್ಟವರು ನ್ಯಾಯವಾಗಿ ನಾವು ಕ್ರಿಸ್ತನವರು. ಯಾರ್‍ಯಾರು ನಿಂದಿಸುತ್ತಾರೋ ಅವರು ಅವನ ಸ್ವತ್ತಿನ ಮೇಲೆ ಆಕ್ರಮಣ ಮಾಡುವವರಾಗಿದ್ದಾರೆ.

ಲೈಂಗಿಕ ಕಿರುಕುಳ, ಮಾನಸಿಕ ಅಥವಾ ದೈಹಿಕ ಕಿರುಕುಳ ಎಂದಿಗೂ ಕೌಟುಂಬಿಕ ಚೌಕಟ್ಟಿಗೆ ಸೀಮಿತಪಡುವುದಿಲ್ಲ. ಇದು ಯಾವಾಗಲೂ ಕುಟುಂಬದ ಖಾಸಗಿ ವ್ಯವಹಾರವಲ್ಲ ಹಾಗಾಗಿ ಈ ಸಮಸ್ಯೆಗಳನ್ನು ಇದರೊಳಗೆ ಪರಿಹರಿಸಲು ಬರುವುದಿಲ್ಲ. ಇದು ಹೊರಗಿನವರ ಮಧ್ಯಸ್ಥಿಕೆಯಿಂದ ಪರಿಹರಿಸಿಕೊಳ್ಳಬೇಕು. ನಿಮ್ಮ ಕುಟುಂಬದಲ್ಲಿ ನೀವು ಶೋಷಣೆಗೆ ಒಳಗಾಗುತ್ತಿದ್ದಲ್ಲಿ ದಯವಿಟ್ಟು ನಂಬಲರ್ಹ ವೃತ್ತಿಪರರಿಂದ ಸಹಾಯ ಪಡೆದುಕೊಳ್ಳಿರಿ.

ನೀವು ಈವಾಗ ನೀವು ಎಂಥದ್ದೇ ಕೌಟುಂಬಿಕ ಸಮಸ್ಯೆಯನ್ನು

ಅನುಭವಿಸುತ್ತಿದ್ದರೂ ನಿಮ್ಮ ಮೇಲೆ ಅನ್ವಯ ಮಾಡಿಕೊಳ್ಳಬಹುದಾದ ಕೆಲವು ಸತ್ಯವೇದಾಧಾರಿತ ನಿಯಮಗಳಾವುವು?

**ಸೋಮವಾರ** **ಆಗಸ್ಟ್ 9**

## ವೇದಿಕೆಯನ್ನು ಸಜ್ಜುಗೊಳಿಸುವುದು

ಯೋಸೇಫನು ತನ್ನ ಅಣ್ಣಂದಿರನ್ನು ಕ್ಷಮಿಸಿದನು. ಆತನು ಅವರನ್ನು ನಿಖರವಾಗಿ ಯಾವಾಗ ಕ್ಷಮಿಸಿದನೆಂದು ನಮಗೆ ಗೊತ್ತಾಗುವುದಿಲ್ಲ. ಆದರೆ ಅವರು ಅವನ ಮುಂದೆ ಕಾಣಿಸಿಕೊಳ್ಳುವ ಬಹಳ ಮೊದಲೇ ಕ್ಷಮಿಸಿರುವುದು ಗೊತ್ತಾಗುತ್ತದೆ. ಒಂದು ವೇಳೆ ಯೋಸೇಫನು ತನ್ನ ಅಣ್ಣಂದಿರನ್ನು ಕ್ಷಮಿಸದೇ ಹೋಗಿದ್ದರೆ ಐಗುಪ್ತದಲ್ಲಿ ಎಂದೆಂದಿಗೂ ಮೇಲಕ್ಕೆ ಬರುತ್ತಿರಲಿಲ್ಲ. ಯಾಕೆಂದರೆ ಸಿಟ್ಟು, ದ್ವೇಷ ಅವನ ಪ್ರಾಣವನ್ನು ತಿಂದುಹಾಕುತ್ತಿತ್ತು. ದೇವರೊಂದಿಗಿನ ಅವನ ಸಂಬಂಧ ನಾಶವಾಗುತ್ತಿತ್ತು.

ತಮ್ಮ ಮೇಲೆ ನಡೆದ ಹಿಂಸೆ ಧಾಳಿಗಳಲ್ಲಿ ಬದುಕುಳಿದ ಜನರ ಅಧ್ಯಯನಗಳು ಒಂದು ಸತ್ಯಸಂಗತಿಯನ್ನು ಹೇಳುತ್ತವೆ. ತಮ್ಮ ವಂಚನೆಯಿಂದ ಹಿಂಸೆಗೆ ಒಳಗಾದ ಬಲಿಪಶುಗಳ ಧಾರುಣ ಸ್ಥಿತಿಯು ಹಾಗೆ ಮಾಡಿದವರ ಮನಸ್ಸಿನ ನೆಮ್ಮದಿಯನ್ನು ಕೆಡಿಸಿ ಬಿಡುತ್ತದೆ. ಅದಕ್ಕೆ ಅವರು ಕಂಡುಕೊಳ್ಳಬೇಕಾದ ಪರಿಹಾರವೆಂದರೆ ತಾವಾಗಿಯೇ ಬಲಿಪಶುಗಳನ್ನು ಕ್ಷಮಿಸುವುದು ಮತ್ತು ಬಲಿಪಶುಗಳನ್ನು ಅವರನ್ನು ಕ್ಷಮಿಸುವುದು. ಕ್ಷಮಿಸದೆ ಹೋದರೆ ನಾವು ಬಲಿಪಶುಗಳಾಗಿ ಉಳಿದು ಬಿಡುತ್ತೇವೆ (ಬಲಿಪಶುವಾದ ಜಾನಿಯು ಅದಕ್ಕೆ ಕಾರಣಳಾದ ಜೋನಳನ್ನೇ ಕ್ಷಮಿಸಿದನು).

ಕ್ಷಮಾಪಣೆ ಎಂಬುದು ನಮಗೆ ತಪ್ಪು ಮಾಡಿದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂಬಂಧಪಡುವುದಕ್ಕಿಂತ ಕ್ಷಮಿಸುವ ನಮಗೆ ಹೆಚ್ಚಿನದನ್ನು ಮಾಡುತ್ತದೆ.

ಯೋಸೇಫನು ತನ್ನ ಅಣ್ಣಂದಿರನ್ನು ಕ್ಷಮಿಸಿದಾಗ್ಯೂ ತನ್ನ ಕುಟುಂಬ ಸಮಸ್ಯೆಯನ್ನು ಇದ್ದಂತೆಯೇ ಇರುವುದಕ್ಕೆ ಬಿಡಲು ಅವನು ಸಿದ್ಧನಿರಲಿಲ್ಲ ಅಂದರೆ ಅವನ ದಾತಾನಿನ ಗುಂಡಿಯಲ್ಲಿ ಬಿದ್ದಾಗ ಇದ್ದ ವೈಮನಸ್ಸು. ಆತನು ಏನಾದರೊಂದು ಬದಲಾವಣೆಗೆ ಪ್ರಯತ್ನಿಸಿದನು.

ಯೋಸೇಫನು ಏನನ್ನು ವಿಚಾರಿಸಿದನು? ಆದಿಕಾಂಡ 42:21–24ನ್ನು ಓದಿರಿ. ಆತನು ತನ್ನ ಸೋದರ ವಿಷಯದಲ್ಲಿ ಏನು ಅಂತುಕೊಂಡನು?

ಎಲ್ಲಾ ಸಂವಾದಗಳು ಒಬ್ಬ ದುಭಾಷಿಯ ಮೂಲಕ ನಡೆಯಿತು. ಹಾಗಾಗಿ ಯೋಸೇಫ ಅವರನ್ನು ತಿಳಿದುಕೊಂಡಿದ್ದಾನೆಂದು ಅವರ ಅಣ್ಣಂದಿರಿಗೆ ಮಾಡಿದ ತಪ್ಪೊಪ್ಪಿಗೆಯನ್ನು ಕೇಳಿಸಿಕೊಂಡನು. ಅದನ್ನು ಅವರು ಯೋಸೇಫನನ್ನು ಸಾಯಿಸಿ ಬಿಟ್ಟು ಆ ವಿಷಯವನ್ನು ತಮ್ಮ ತಂದೆಗೆ ಹೇಳದೆ ಸುಮ್ಮನೆ ಉಳಿದುಕೊಳ್ಳಬೇಕೆಂದಿದ್ದರು ಅವರಿಗೆ ಅವನ ಕನಸನ್ನು ಸಹಿಸಿಕೊಳ್ಳಬೇಕಾದ ಸಂದರ್ಭ ಬರುವದಿಲ್ಲವೆಂದು ಕೊಂಡಿದ್ದರು ಅಥವಾ ತಮ್ಮ ತಂದೆಯ ಮುದ್ದಿನ ಮಗನ ಸ್ಥಾನದಲ್ಲಿ ಅವನು ಸಂತೋಷವಾಗಿರುವುದನ್ನು ನೋಡುವುದಿಲ್ಲವೆಂದು ಕೊಂಡಿದ್ದರು. ಆದರೆ ಇದರಿಂದ ವಿಶ್ರಾಂತಿಯನ್ನು ಕಂಡುಕೊಳ್ಳುವ ಬದಲು ಈ ಎಲ್ಲಾ ವರುಷಗಳೂ ಹೃದಯದಲ್ಲಿ ಪಾಪಪ್ರಜ್ಞೆಯಿಂದ ಹಿಂಸೆಪಡುತ್ತಿದ್ದರು. ಅವರ ಕೃತ್ಯವು ಅವರನ್ನು ಕಳವಳಕ್ಕೆ ದೂಡಿತು ಮತ್ತು ದೇವರ ಪ್ರತೀಕಾರದ ಭಯವನ್ನು ಹುಟ್ಟಿಸಿತು. ಯೋಸೇಫನಿಗೆ ಅವರ ಪಾಡು ನೋಡಿ ದುಃಖವಾಯ್ತು. ಆತನು ಅವರಿಗಾಗಿ ಅತ್ತನು.

ಯೋಸೇಫನಿಗೆ ಬರಗಾಲವು ಇನ್ನೂ ಕೆಲವು ವರುಷಗಳವರೆಗೆ ಮುಂದುವರೆಯುತ್ತದೆ ಎಂಬುದು ಗೊತ್ತಿತ್ತು. ಆದುದರಿಂದ ಮುಂದಿನ ಸಲ ಬರುವಾಗ ಬೆಂಜಮಿನನ್ನು ಜೊತೆಗೆ ಕರೆದು ತರುವಂತೆ ತಾಕೀತು ಮಾಡಿದನು (ಆದಿಕಾಂಡ 42:20). ಆತನು ಸಿಮಿಯೋನನ್ನು ಒತ್ತೆ ಇಟ್ಟುಕೊಂಡನು. (ಆದಿಕಾಂಡ 42:24).

ಬೆಂಜಮೀನನು ಇನ್ನೂ ಬದುಕುಳಿದಿರುವುದನ್ನು ನೋಡಿದ ಮೇಲೆ ಆತನು ಅವರಿಗೆ ವಿಶೇಷವಾದ ಔತಣವನ್ನು ಏರ್ಪಡಿಸಿದನು. ಅಲ್ಲಿ ಅವನು ಉದ್ದೇಶ ಪೂರ್ವಕವಾಗಿ ಬೆಂಜಮೀನನಿಗೆ ಹೆಚ್ಚಿನ ಪ್ರೀತಿ ತೋರಿಸಿ ಪಕ್ಷಪಾತ ಮಾಡಿದನು. ಹಳೆಯ ರೀತಿಯಲ್ಲಿಯೇ ಇನ್ನೂ ಇದ್ದಾರೆಯೇ ಎಂದು ಪರೀಕ್ಷಿಸಿದನು (ಆದಿಕಾಂಡ 43:34).

ಅವನ ಅಣ್ಣಂದಿರು ಯಾವುದೇ ಹೊಟ್ಟೆಕಿಚ್ಚನ್ನು ತೋರಿಸಲಿಲ್ಲ. ಆದರೆ ಯೋಸೇಫನಿಗೆ ಅವರು ಎಷ್ಟು ಕಪಟಿಗಳು ಎಂಬುದು ತಿಳಿದಿತ್ತು. ಅವರು ಇಡೀ ಊರನ್ನೇ ಮೋಸಪಡಿಸಿದ್ದರು (ಆ.ಕಾಂಡ 34:13). ತನ್ನ ಬಗ್ಗೆ ತಂದೆಗೆ ಸುಳ್ಳು ಹೇಳಿದ್ದರೆಂಬುದು ಅವನಿಗೆ ನಿಶ್ಚಯವಾಗಿ ತಿಳಿದಿತ್ತು (ಆ.ಕಾಂಡ 37:21–34). ಆದುದರಿಂದ ಅವನು ಮತ್ತೊಂದು ಪರೀಕ್ಷೆಯನ್ನು ಉದ್ದೇಶಿಸಿದನು (ಆ.ಕಾಂಡ 44ನ್ನು ಓದಿರಿ).

ಆದಿಕಾಂಡ 45:1–5ನ್ನು ಓದಿರಿ. ಯೋಸೇಫನು ತನ್ನ ಅಣ್ಣಂದಿರನ್ನು ಕ್ಷಮಿಸಿದಾಗ ಅವರ ಬಗ್ಗೆ ಆತನು ಏನು ಭಾವಿಸಿಕೊಂಡನೆಂದು ಇದು ಹೇಳುತ್ತದೆ? ಯಾವ ಬುದ್ಧಿ ಪಾಠಗಳನ್ನು ಈ ಕಥೆಯಿಂದ ನಾವು ತೆಗೆದುಕೊಳ್ಳಬಹುದು?

**ಮಂಗಳವಾರ** **ಆಗಸ್ಟ್ 10**

## ಕ್ಷಮಿಸಿರಿ ಮತ್ತು ಮರೆಯಿರಿ?

ಕ್ಷಮಾಪಣೆ ಎಂಬುದನ್ನು ಹೀಗೆ ವ್ಯಾಖ್ಯಾನ ಮಾಡಬಹುದು: ನಮಗೆ ತಪ್ಪು ಮಾಡಿದ ವ್ಯಕ್ತಿ ಅಥವಾ ಅನ್ಯಾಯವೆಸಗಿದವರ ಮೇಲೆ ನಾವು ಅಸಮಾಧಾನಪಡುವ, ಖಂಡಿಸುವ ಮತ್ತು ಪ್ರತೀಕಾರ ತೀರಿಸಿಕೊಳ್ಳುವ ನಮ್ಮ ಹಕ್ಕನ್ನು ಬಿಟ್ಟುಕೊಡುವ ಸಿದ್ಧಮನಸ್ಸು ಎಂದು ಹೇಳಬಹುದು. ಡಾಕ್ಟರ್‌ಮರಿನ್ ಆರ್ಮರ್ ಒಬ್ಬ ಕೌಟುಂಬಿಕ ಚಿಕಿತ್ಸಕರಾಗಿದ್ದಾರೆ. ಅವರು ಹಾಲೋಕಾಸ್ಟ್–ಯಹೂದಿಗಳ ಹತ್ಯಾಕಾಂಡದಲ್ಲಿ ಬದುಕುಳಿದವರ ಜೊತೆ ಕೆಲಸ ಮಾಡಿದ್ದಾರೆ, ಬದುಕುಳಿದವರು ತಮಗಾದ ಅನ್ಯಾಯಕ್ಕೆ ಪ್ರತಿಯಾಗಿ ಯಾವ ಭಾವನೆವಿರುತ್ತದೆ ಎಂಬುದನ್ನು ಅಧ್ಯಯನ ಮಾಡುತ್ತಿದ್ದರು ಅವರು ಹೀಗೆ ಬರೆಯುತ್ತಾರೆ. "ಕ್ಷಮಾಪಣೆ ಎಂಬುದು ಒಬ್ಬ ನೊಂದ ವ್ಯಕ್ತಿಯ ಉದ್ದೇಶಿತ ಕಾರ್ಯವಾಗಿದೆ. ಅದು ತನ್ನಷ್ಟಕ್ಕೆ ತಾನೆ ಆಗುವುದಿಲ್ಲ".

ಕ್ಷಮಾಪಣೆಯಲ್ಲಿ ತತ್ಪರಿಣಾಮಗಳು (ಪ್ರತಿಫಲಗಳು) ಇರುವುದಿಲ್ಲವೆಂದು ಅರ್ಥಬರುವುದಿಲ್ಲ. ಕ್ಷಮಾಪಣೆ ಎನ್ನುವುದು ನಿಂದೆ ಮಾಡುವವನನ್ನು ತನ್ನ ನಿಂದೆಯ ವಿಧಾನಗಳನ್ನು ಮುಂದುವರೆಸಿಕೊಂಡು ಹೋಗಲು ಬಿಡುವುದಿಲ್ಲ. ಕ್ಷಮಾಪಣೆ ಎಂದರೆ ನಮ್ಮ ಅಸಮಾಧಾನವನ್ನು ಮತ್ತು ಪ್ರತೀಕಾರದ ಆಸೆಯನ್ನು ದೇವರ ಕಡೆಗೆ ತಿರುಗಿಸುವುದೇ ಆಗಿದೆ.

ಹಾಗೆ ಮಾಡದೆ ಹೋದರೆ ನಮ್ಮ ಸಿಟ್ಟು, ಸಿಡುಕು, ಅಸಮಾಧಾನ ಮತ್ತು ದ್ವೇಷವು ನಮಗೆ ಅನ್ಯಾಯ ಮಾಡಿದವರಿಗಿಂತ ಹೆಚ್ಚು ಕೆಡುಕು ಮಾಡುತ್ತವೆ.

ಮತ್ತೊಬ್ಬರನ್ನು ಕ್ಷಮಿಸುವುದು ನಮಗೆ ಏನನ್ನು ಮಾಡುತ್ತದೆ? ಮತ್ತಾಯ 18:21–35ನ್ನು ಪರಿಗಣಿಸಿರಿ.

ಸಂದೇಹವಿಲ್ಲ, ಇತರರನ್ನು ಕ್ಷಮಿಸುವಲ್ಲಿ ನಾವು ಕಲಿಯುವ ಒಂದು ಪಾಠ ಏನೆಂದರೆ ನಾವು ಸಹ ಕ್ರಿಸ್ತನಲ್ಲಿ ಕ್ಷಮಿಸಲ್ಪಟ್ಟಿದ್ದೇವೆ ಎಂಬುದನ್ನು ಅರ್ಥ

ಮಾಡಿಕೊಳ್ಳುವುದು. ನಾವೆಲ್ಲರೂ ಪಾಪಗಳನ್ನು ಮಾಡಿದ್ದೇವೆ ಕೇವಲ ಮನುಷ್ಯರ ವಿರುದ್ಧವಲ್ಲ, ಆದರೆ ದೇವರ ವಿರುದ್ಧವಾಗಿಯೂ ಸಹಾ ಮಾಡಿದ್ದೇವೆ.

ನಾವು ಮಾಡುವ ಪ್ರತಿಪಾಪವು ನಮ್ಮ ಕರ್ತನ ಮತ್ತು ಉಂಟುಮಾಡಿದತನ ವಿರುದ್ಧ ಮಾಡಿರುತ್ತೇವೆ. ಆದಾಗ್ಯೂ ನಮ್ಮ ಎಲ್ಲಾ ಪಾಪಗಳಿಗೆ ಯೇಸುಕ್ರಿಸ್ತನಲ್ಲಿ ಪೂರ್ಣ ಕ್ಷಮಾಪಣೆಯನ್ನು ಹೊಂದಿಕೊಳ್ಳಬಹುದು, ನಾವು ಇದಕ್ಕೆ ಅರ್ಹರು ಎಂಬ ಕಾರಣಕ್ಕಲ್ಲ, ನಾವು ಅರ್ಹರಲ್ಲ– ದೇವರ ಕೃಪೆಯು ನಮಗಿರುವುದರಿಂದ ಮಾತ್ರ ಇದು ಸಾಧ್ಯ. ಒಮ್ಮೆ ಈ ಪವಿತ್ರ ಸತ್ಯವನ್ನು ಗ್ರಹಿಸಿದ ಮೇಲೆ, ಒಮ್ಮೆ ನಾವು ಈ ಕ್ಷಮಾಪಣೆಯನ್ನು ನಾವು ಸ್ವಂತ ಮಾಡಿಕೊಂಡರೆ, ಒಮ್ಮೆ ನಾವು ದೇವರ ಕ್ಷಮೆಯನ್ನು ನಿಜವಾಗಿ ಅನುಭವಿಸಿದರೆ ನಾವು ಇತರರನ್ನು ಕ್ಷಮಿಸುತ್ತೇವೆ ಮತ್ತು ಮರೆಯುತ್ತೇವೆ, ನಾವು ಕ್ಷಮಿಸುವುದು ಅವರು ಕ್ಷಮೆಗೆ ಅರ್ಹರು ಎಂದಲ್ಲ. ಆದರೆ ದೇವರಿಂದ ನಾವು ಹೊಂದಿಕೊಂಡಿರುವುದು ಇದನ್ನೇ ಹಾಗಾಗಿ ಕ್ಷಮಿಸುವುದು ನಮಗೆ ಅವಶ್ಯಕವಾಗಿದೆ. ಜೊತೆಗೆ, ನಾವು ಸಹ ಕ್ಷಮೆ ಹೊಂದಿಕೊಳ್ಳುವುದಕ್ಕೆ ಎಷ್ಟು ಸಲ ಅರ್ಹರಾಗಿದ್ದೇವೆ?

ಯೋಸೇಫನೂ ಸಹಾ ತನ್ನ ಕುಟುಂಬದ ಸಂಬಂಧಗಳಿಗೆ ಎರಡನೇ ಅವಕಾಶ ಕೊಟ್ಟನು. ಇಲ್ಲಿ ದ್ವೇಷ ಅಸೂಯೆಗಳಿಲ್ಲ; ಹಿಂದೆ ನಡೆದ ವಿಷಯಗಳನ್ನು ಇಟ್ಟುಕೊಳ್ಳದೆ ಜೀವಿಸುವುದು ಆಗಿದೆ.

ಕುಟುಂಬದಲ್ಲಿ ಪ್ರತಿಯೊಬ್ಬರು ಮತ್ತೊಬ್ಬರ ಮನಸ್ಸನ್ನು ನೋಯಿಸುವ ಕೆಲಸದಲ್ಲಿ ಪ್ರವೀಣರಾದರೆ ಖಂಡಿತವಾಗಿಯೂ ಕುಟುಂಬವನ್ನು ಮತ್ತೆ ಆರಂಭಿಸಲು (ಕಟ್ಟುವುದಕ್ಕೆ) ಬಹಳಷ್ಟು ಕಷ್ಟವಾಗುತ್ತದೆ. ಯೋಸೇಫನಿಗೆ ಹಳೆಯ ಕಹಿಭಾವನೆಗಳನ್ನೆಲ್ಲ ಹಿಂದಕ್ಕೆ ಹಾಕಿ ಪ್ರೀತಿಯಿಂದಲೂ ಸಮ್ಮತಿಯಿಂದಲೂ ಮುಂದಕ್ಕೆ ನಡೆದುಕೊಂಡು ಹೋಗಬೇಕು ಎಂದುಕೊಂಡನು. ಒಂದು ವೇಳೆ ಯೋಸೇಫನ ಮನೋವೃತ್ತಿ ಬೇರೆಯಾಗಿರುತ್ತಿದ್ದರು. ಇದು ಸಂತೋದ ಕಥೆಯಾಗುತ್ತಿರಲಿಲ್ಲ.

"ಯಾರ ಅಪರಾಧಗಳು ಪರಿಹಾರವಾಗಿವೆಯೋ, ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು. ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವುದಿಲ್ಲವೋ ಆ ಮನುಷ್ಯನೇ ಧನ್ಯನು" (ರೋಮ 4:7,8). ನಮಗೆ ಯೇಸುಕ್ರಿಸ್ತನಲ್ಲಿ ಏನು ಕೊಡಲ್ಪಟ್ಟಿತು ಮತ್ತು ಹೇಗೆ ಈ ಅದ್ಭುತವಾದ ವಾಗ್ದಾನವು ನಮ್ಮ ಮೇಲೆ

ಪ್ರಭಾವ ಹೊಂದಿದೆ, ನಮ್ಮ ಮನಸ್ಸು ನೋಯಿಸಿದವರ ಜೊತೆ ನಾವು ಹೇಗೆ ನಡೆದುಕೊಳ್ಳುತ್ತೇವೆ ಎಂಬುದರ ಬಗ್ಗೆ ಪೌಲನು ಹೇಳುವುದೇನು?

**ಬುಧವಾರ** **ಆಗಸ್ಟ್ 11**

## ಕಾರ್ಯಕ್ಕೆ ತರುವುದು (ಅನುಷ್ಠಾನಕ್ಕೆ ತರುವುದು)

ನಾವು ಕ್ಷಮಿಸಬೇಕು ಎಂದರೆ, ನಮ್ಮ ಮನಸ್ಸಿಗಾದ ನೋವನ್ನು ನಾವು ಒಪ್ಪಿಕೊಳ್ಳಬೇಕು. ನಾವು ನಮ್ಮ ಭಾವನೆಗಳನ್ನು ಮುಚ್ಚಿಟ್ಟುಕೊಳ್ಳುವ ಸ್ವಭಾವದವ–ರಾಗಿದ್ದರೆ ಒಪ್ಪಿಕೊಳ್ಳುವುದು ನಮಗೆ ಕಠಿಣವೆನಿಸುತ್ತದೆ. ನಾವು ನಮ್ಮ ಅಕ್ರೈಸ್ತ ಭಾವನೆಗಳನ್ನು (ಅಸಮಾಧಾನಗಳನ್ನು) ದೇವರ ಮುಂದೆ ತೋಡಿಕೊಳ್ಳುವುದು ಉತ್ತಮ. ಇದನ್ನು ಕೀರ್ತನೆಗಳಲ್ಲಿ ಬಹಳ ಸಲ ನೋಡುತ್ತೇವೆ. ನಮಗೆ ಏನು ಇಷ್ಟವಾಗಲಿಲ್ಲವೋ ಅದನ್ನು ದೇವರ ಜೊತೆ ಹೇಳಿಕೊಳ್ಳುವುದಕ್ಕೆ ನಾವು ಹಿಂಜರಿಯಬಾರದು.

ಯೋಸೇಫನ ಕಥೆಯಲ್ಲಿ ಆತನು ತನ್ನ ಅಣ್ಣಂದಿರನ್ನು ಪುನಃ ನೋಡಿದಾಗ ಅಳುವುದನ್ನು ನೋಡುತ್ತೇವೆ. ಅವನು ಅತ್ತು ತನ್ನ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಾನೆ. ಶಿಲುಬೆಯ ಮೇಲೆ ಯೇಸುಕ್ರಿಸ್ತನು ಮಾಡಿದ ಘೋಷಣೆಯು ಕ್ಷಮಿಸುವ ಸಮಯದ ಬಗ್ಗೆ ನಮಗೆ ಏನು ಹೇಳುತ್ತದೆ? (ಲೂಕ 23:34 ಓದಿರಿ).

ಯೇಸುಕ್ರಿಸ್ತನು ಕ್ಷಮಾಪಣೆ ಕೇಳುವಾಗ ಮೊದಲು ನಾವು ಕ್ಷಮೆ ಕೇಳಬೇಕು ಎಂದು ಕಾಯಲಿಲ್ಲ. ನಾವು ನಮ್ಮ ಮನನೋಯಿಸಿದವರು ನಮ್ಮ ಕ್ಷಮೆಯನ್ನು ಮೊದಲು ಕೇಳಲಿ ಎಂದು ಕಾಯಬಾರದು. ಅವರು ನಮ್ಮ ಕ್ಷಮೆಯನ್ನು ಒಪ್ಪಿಕೊಳ್ಳದಿದ್ದರೂ ಅವರನ್ನು ನಾವು ಕ್ಷಮಿಸಬಹುದು.

ಲೂಕ 6:28 ಮತ್ತು ಮತ್ತಾಯ 5:44 ನಾವು ಹೇಗೆ ನಮ್ಮ ವೈರಿಗಳ ವಿಷಯದಲ್ಲಿ ನಡೆದುಕೊಳ್ಳಬೇಕೆಂದು ಬೋಧಿಸುತ್ತವೆ?

ಕ್ಷಮಾಪಣೆ ಎಂಬುದು ಪ್ರೀತಿಯಂತೆಯೇ, ನಮ್ಮ ಆಯ್ಕೆಯಿಂದ ಆರಂಭಗೊಳ್ಳುತ್ತದೆ, ಇದು ಕೇವಲ ಅನಿಸಿಕೆ (ಭಾವನೆ)ಯಲ್ಲ. ನಮ್ಮ ಭಾವನೆಗಳಿಗೆ ಈ ತೀರ್ಮಾನ ತೆಗೆದುಕೊಳ್ಳಲು ಒಪ್ಪದಿದ್ದರೂ ನಾವು ಕ್ಷಮಿಸುವ ಆಯ್ಕೆಯನ್ನು ಮಾಡಬಹುದು. ನಮ್ಮ ಸ್ವಂತ ಬಲದಿಂದ ಇದು ಸಾಧ್ಯವಿಲ್ಲವೆಂಬುದು ದೇವರಿಗೆ

ಗೊತ್ತು, ಆದರೆ ದೇವರಿಗೆ ಎಲ್ಲವು ಸಾಧ್ಯವೇ (ಮಾರ್ಕ 10:27). ಆದುದರಿಂದಲೇ ನಾವು ನಮಗೆ ತಪ್ಪು ಮಾಡಿದವರಿಗೋಸ್ಕರ ಪ್ರಾರ್ಥಿಸಬೇಕು. ಇದು ಕೇವಲ ಸಂದರ್ಭಗಳಲ್ಲಿ ವ್ಯಕ್ತಿಯು ಈಗಾಗಲೇ ಸತ್ತು ಹೋಗಿರುತ್ತಾನೆ, ಆದರೆ ನಾವು ಆತನನ್ನು ಕ್ಷಮಿಸುವುದಕ್ಕೋಸ್ಕರ ಈಗಲೂ ಪ್ರಾರ್ಥಿಸಬೇಕು. ಸಂದೇಹವೇ ಇಲ್ಲ, ಕ್ಷಮಿಸುವುದು ಯಾವಾಗಲೂ ಸುಲಭವಲ್ಲ. ನಮಗಾಗಿರುವ ನೋವು ಮತ್ತು ಹಾನಿಯು ನಮ್ಮನ್ನು ಬಡಿದು ಹಾಕಿರುತ್ತದೆ. ನಮ್ಮ ಮನಸ್ಸಿಗೆ ಗಾಸಿಯಾಗಿರುತ್ತದೆ, ನಾವು ನಿಷ್ಕ್ರಿಯರಾಗಿರುತ್ತೇವೆ, ಮನಗುಂದಿ ಹೋಗಿರುತ್ತೇವೆ.

ಇದಕ್ಕೆ ಸ್ವಸ್ಥತೆ ಸಿಗುತ್ತದೆ, ನಾವು ಅವಕಾಶ ಮಾಡಿಕೊಡಬೇಕಷ್ಟೆ. ಆದರೆ ನಾವು ನಮ್ಮ ಕಹಿಭಾವನೆಯನ್ನು, ಕೋಪ ತಾಪಗಳನ್ನು ಹಾಗೆಯೇ ಹಿಡಿದು–ಕೊಂಡುಬಿಟ್ಟರೆ ಸ್ವಸ್ಥತೆಯು ಬಹಳ ಕಠಿಣವಾಗುತ್ತದೆ. ದೇವರು ನಮ್ಮನ್ನು ಕ್ಷಮಿಸಲು ಎಷ್ಟು ದುಬಾರಿಯಾದದ್ದು (ಹೆಚ್ಚಿನ ಬೆಲೆಯುಳ್ಳದ್ದು) ಎಂಬುದಕ್ಕೆ ಶಿಲುಬೆಯು ಉತ್ತಮ ಉದಾಹರಣೆಯಾಗಿದೆ. ಯೇಸುಕ್ರಿಸ್ತನೂ ಸಹಾ ನಮಗೋಸ್ಕರ ಸಹಿಸಿಕೊಂಡು ಇದನ್ನು ಮುಂದುವರೆಸುತ್ತಾನೆ. ಅನೇಕರು ತನ್ನನ್ನು ತಿರಸ್ಕಾರ ಮಾಡುತ್ತಾರೆ ಎಂಬುದು ಅವನಿಗೆ ಗೊತ್ತಿದ್ದರೂ ಹಾಗೆ ಮಾಡುತ್ತಿದ್ದಾನೆ. ಆದುದರಿಂದ ಖಂಡಿತವಾಗಿಯೂ ನಾವೂ ಸಹಾ ಕ್ಷಮಿಸುವುದನ್ನು ಕಲಿಯಬಹುದು.

ನಿಮಗೆ ತಪ್ಪು ಮಾಡಿದವರ ಸಲುವಾಗಿಯಲ್ಲದೆ ನೀವು ಯಾರಿಗೋಸ್ಕರ ಕ್ಷಮೆ ನೀಡಬೇಕು, ನಿಮಗೋಸ್ಕರವೇ ಅಲ್ಲವೇ?

**ಗುರುವಾರ** **ಆಗಸ್ಟ್ 12**

## ಕ್ಷಮಾಪಣೆಯ ನಂತರ ವಿಶ್ರಾಂತಿ ಕಂಡುಕೊಳ್ಳುವುದು

ಯೋಸೇಫನ ಕುಟುಂಬ ಕಡೆಯದಾಗಿ ಐಗುಪ್ತದೇಶಕ್ಕೆ ಬಂದು ನೆಲೆಸಿತು. ಕುಟುಂಬದಲ್ಲಿ ತಿಳಿಯಲಾರದ ಗುಟ್ಟುಗಳು ಒಂದೂ ಉಳಿಯಲಿಲ್ಲ. ಅವನ ಅಣ್ಣಂದಿರು ತಮ್ಮ ತಂದೆಗೆ ಯೋಸೇಫನ ವಿಷಯದಲ್ಲಿ ಎಲ್ಲವನ್ನು ವಿವರಿಸುವಾಗ ನೀನು ಸುತ್ತುಹೋದನು ಎಂದು ತಿಳಿದುಕೊಂಡಿದ್ದ ನಿನ್ನ ಮಗನು ಐಗುಪ್ತ ದೇಶದಲ್ಲಿ ಪ್ರಧಾನಮಂತ್ರಿಯಾಗಿದ್ದಾನೆ ಎಂಬುದಾಗಿ ಹೇಳಿ ಒಪ್ಪಿಕೊಂಡಿದ್ದರು.

ಯಾವಾಗಲೂ ಮುರಿದ ಸಂಬಂಧವನ್ನು ಮತ್ತೆ ಮರುಸ್ಥಾಪನೆ ಮಾಡಿಕೊಳ್ಳುವುದು ಸಾಧ್ಯವಾಗುವುದಿಲ್ಲ ಅಥವಾ ಅದು ಬುದ್ಧಿವಂತಿಕೆಯಾಗುವುದಿಲ್ಲ, ಇದರರ್ಥ

ನಾವು ಕ್ಷಮಿಸುವುದಕ್ಕಾಗುವುದಿಲ್ಲ ಎಂದಲ್ಲ. ನಾವು ನಮಗೆ ತಪ್ಪು ಮಾಡಿದವನನ್ನು ತಬ್ಬಿಕೊಂಡು ಅಳುವುದಕ್ಕೆ ಆಗದಿರಬಹುದು, ಆದರೆ ನಾವು ನಮ್ಮ ಬಾಯಿಂದ ಇಲ್ಲವೇ ಒಂದು ಪತ್ರ ಬರೆದು ನಮ್ಮ ಕ್ಷಮೆಯನ್ನು ತಲುಪಿಸಬಹುದು. ನಂತರ ನಮ್ಮೆಲ್ಲಾ ನೋವನ್ನು ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ಮನಸ್ಸಿನಿಂದ ಹೊರಕ್ಕೆ ಹಾಕುವುದು, ಕೆಲವು ಸಲ ನಾವು ಎಷ್ಟೇ ಪ್ರಯತ್ನಿಸಿದರೂ ಕೆಲವು ನೋವು ಉಳಿದುಕೊಳ್ಳಬಹುದು, ಆದರೆ ನಾವು ಸ್ವಸ್ಥತೆಯ ಮಾರ್ಗದಲ್ಲಿರುತ್ತೇವೆ.

ಆದಿಕಾಂಡ 50:15–21ನ್ನು ಓದಿರಿ. ಯೋಸೇಫನ ಅಣ್ಣಂದಿರು ಯಾತಕ್ಕಾಗಿ ಚಿಂತೆ ಮಾಡಿದರು, ಹಾಗೆ ಅವರು ಚಿಂತೆ ಮಾಡಬೇಕಿತ್ತು? ಅವರ ಹೆದರಿಕೆ ಅವರ ಬಗ್ಗೆ ಏನು ಹೇಳುತ್ತದೆ?

ಯೋಸೇಫನ ಅಣ್ಣಂದಿರು ಐಗುಪ್ತದೇಶಕ್ಕೆ ಂದು ನೆಲೆಸಿ ಹದಿನೇಳು ವರುಷಗಳು ಕಳೆದವು (ಆದಿಕಾಂಡ 47:28). ಆದಾಗ್ಯೂ,ಬ ಅವರ ತಂದೆ ತೀರಿಕೊಂಡ ಮೇಲೆ ಸರ್ವಾಧಿಕಾರಿಯಾದ ತನ್ನ ತಮ್ಮನ್ನು ನಮ್ಮ ಮೇಲೆ ಸೇಡು ತೀರಿಸಿಕೊಳ್ಳುತ್ತಾನೆ ಎಂದು ಹೆದರಿದರು. ಇದರಿಂದ ತಮ್ಮ ತಮ್ಮನಿಗೆ ಮತ್ತೆ ಎಷ್ಟು ನೋವಾಯ್ತು ಎಂದು ಅರಿತುಕೊಂಡರು. ಯೋಸೇಫನು ತಂದೆಯು ತೀರಿಕೊಂಡ ನಂತರ ತನ್ನ ಅಣ್ಣಂದಿರಿಗೆ ಕ್ಷಮಾಪಣೆಯ ಮರು ಆಶ್ವಾಸನೆ ಕೊಟ್ಟನು. ಈ ಪುನಶ್ಚೇತನವು ಬಹುಶಃ ಯೋಸೇಫನಿಗೂ ಅವನ ಸೋದರರಿಗೂ ಒಳ್ಳೆಯದಾಗಿತ್ತು. ಮನಸ್ಸಿಗಾದ ಗಾಯವು ಬಹಳ ಆಳವಾಗಿದ್ದರೆ, ನಾವು ಬಹುಶಃ ಬಹಳ ಸಲ ಕ್ಷಮಿಸಬೇಕಾಗುತ್ತದೆ. ನಡೆದ ಅಹಿತಕರವಾದುದು ಮತ್ತೆ ನೆನಪಿಗೆ ಬಂದರೆ ನಾವು ಕೂಡಲೇ ದೇವರ ಹತ್ತಿರ ಬಂದು ಮತ್ತೆ ಕ್ಷಮಿಸುವ ಆಯ್ಕೆಯನ್ನು ಮಾಡಿಕೊಂಡು ಪ್ರಾರ್ಥಿಸಬೇಕು.

ಆದಿಕಾಂಡ 50:20ನ್ನು ಓದಿರಿ. ಕನಿಷ್ಠ ಭಾಗಶಃವಾದರೂ, ಯೋಸೇಫನು ತನ್ನ ಸೋದರರು ತನಗೆ ಮಾಡಿದ ಕೇಡನ್ನು ಕ್ಷಮಿಸಿದನು ಎಂಬುದನ್ನು ವಿವರಿಸಲು ಈ ವಚನ ಸಹಾಯ ಮಾಡುತ್ತದೆ ಹೇಗೆ?

ಯೋಸೇಫನು ತನ್ನ ಜೀವನವು ದೇವರ ಮಹಾಯೋಜನೆಯ ಒಂದು ಭಾಗ, ಭೂಲೋಕದ ಜನರನ್ನು ಬರಗಾಲದಲ್ಲಿ ಸಂರಕ್ಷಿಸಿದನು, ತನ್ನ ಕುಟುಂಬವು ದೇವರ ವಾಗ್ದಾನದಂತೆ ದೊಡ್ಡ ಜನಾಂಗವಾಗುವಂತೆ ಉಳಿಸಿದನು ಎಂದು ದೃಢವಾಗಿ ನಂಬಿದ್ದನು. ಅವನ ಅಣ್ಣಂದಿರು ಅವನಿಗೆ ಕೇಡಾಗಬೇಕೆಂದು ಎಣಿಸಿದ್ದರು, ಆದರೆ

ದೇವರು ಮೇಲಾಗಬೇಕೆಂದು ಸಂಕಲ್ಪಿಸಿದನು. ಇದರಿಂದ ಯೋಸೇಫನು ಅವರನ್ನು ಕ್ಷಮಿಸಲು ಸಹಾಯವಾಯ್ತು.

ಯೋಸೇಫನ ಕಥೆಯು ಸುಖಾಂತ್ಯಗೊಳ್ಳುತ್ತದೆ. ಒಂದು ವೇಳೆ ಅಂತ್ಯವು ದುಃಖಕರವಾಗಿದ್ದರೆ ನೀವು ಹೇಗೆ ಪ್ರತಿಕ್ರಿಯೆ ಮಾಡುತ್ತಿದ್ದಿರಿ? ಒಬ್ಬನು ಹೀಗೆ ವಾದ ಮಾಡಬಹುದು, ಪಾಪವು ಏನಿದ್ದರೂ ಮಹಾಹೋರಾಟ ಮುಗಿದ ಮೇಲೆ, ಎಲ್ಲಾ ಸಮಸ್ಯೆಗಳು ತೀರಿದ ಬಳಿಕ ಕೊನೆಯಾಗುತ್ತದೆ ನಂತರ ಸುಖಾಂತ್ಯವಾಗುತ್ತದೆ–ಯಲ್ಲವೇ?

**ಶುಕ್ರವಾರ** **ಆಗಸ್ಟ್ 13**

**ಹೆಚ್ಚಿನ ಚಿಂತನೆ :** ಯೋಸೇಫನು ಹೇಗೆ ತನ್ನ ಸ್ವಂತ ಅಣ್ಣಂದಿರಿಂದ ಪರದೇಶಿಗಳಿಗೆ ಮಾರಲ್ಪಟ್ಟನೋ ಹಾಗೆಯೇ ಯೇಸುಕ್ರಿಸ್ತನು ತನ್ನ ಕಡುವೈರಿಗಳಿಗೆ ತನ್ನ ಶಿಷ್ಯನಿಂದಲೇ ಮಾರಲ್ಪಟ್ಟನು. ಯೋಸೇಫನು ತನ್ನ ಪ್ರಾಮಾಣಿಕತೆಯ ನಿಮಿತ್ತ ಸುಳ್ಳು ಆರೋಪವನ್ನು ಹೊತ್ತು ಸೆರೆಮನೆಗೆ ಹಾಕಿಸಿಕೊಂಡನು; ಹಾಗೆಯೇ ಕ್ರಿಸ್ತನು ನೀತಿಯು ನಿಮಿತ್ತ ಅಸಡ್ಡೆಗೊಳಗಾಗಿ ತಿರಸ್ಕರಿಸಲ್ಪಟ್ಟನು, ಸ್ವನಿಕಾರಣೆಯ ಜೀವನ ಪಾಪವನ್ನು ಖಂಡಿಸುತ್ತದೆ; ಆತನು ಯಾವ ತಪ್ಪು ಮಾಡದಿದ್ದರೂ ಸುಳ್ಳು ಸಾಕ್ಷಿಗಳಿಂದ ದಂಡನೆಗೆ ಗುರಿ ಮಾಡಿದರು. ಯೋಸೇಫನ ಅನ್ಯಾಯದ ಹಿಂಸೆಯಲ್ಲೂ ಅವನು ತೋರಿದ ಶಾಂತತೆ, ತಾಳ್ಮೆ, ಆತನ ದುಷ್ಟ ಅಣ್ಣಂದಿರಿಗೆ ತೋರಿಸಿದ ಕ್ಷಮಾಪಣೆ, ಉಪಕಾರಗಳು ಯೇಸುಕ್ರಿಸ್ತನನ್ನು ಪ್ರತಿನಿಧಿಸುತ್ತವೆ.

ಕ್ರಿಸ್ತನು ಸಹಾ ಹೀಗೆಯೇ ದುಷ್ಟಜನರ ಹಾಸ್ಯ ನಿಂದೆ ಆಪಾದನೆಗಳನ್ನು ಗುಣಗುಟ್ಟದೆ ಸಹಿಸಿಕೊಂಡನು, ತನ್ನನ್ನು ಕೊಂದವರಿಗೆ ಮಾತ್ರವಲ್ಲ. ತನ್ನ ಬಳಿಗೆ ತಮ್ಮ ಪಾಪಗಳನ್ನು ಅರಿಕೆ ಮಾಡ ಕ್ಷಮಾಪಣೆ ಬಯಸುವರೆಲ್ಲರನ್ನೂ ಕ್ಷಮಿಸುತ್ತಾನೆ" – ಎಲೆನ್ ಜಿ ವೈಟಮ್ಮನವರ "ನಮ್ಮ ಪಿತೃಗಳು ಮತ್ತು ಪ್ರವಾದಿಗಳು" ಪುಸ್ತಕದಲ್ಲಿ ಪುಟ 239, 240.

"ಕ್ಷಮಿಸಲಾಗದ ಮನಸ್ಸನ್ನು ಎಂದಿಗೂ ಸಮರ್ಥಿಸಿಕೊಳ್ಳಲಾಗದು. ಯಾರು ಮತ್ತೊಬ್ಬರ ವಿಷಯದಲ್ಲಿ ನಿಷ್ಕರುಣಿಯಾಗಿರುತ್ತಾರೋ ಅವರು ದೈವಕ್ಷಮೆಯ ಮಹಾಕೃಪೆಗೆ ಪಾಲುದಾರರಾಗಿರುವುದಿಲ್ಲ. ದೇವರು ಕ್ಷಮಿಸುವಾಗ ತಪ್ಪಿತಸ್ಥನ ಹೃದಯವು ಅನಂತ ಪ್ರೀತಿಯುಳ್ಳ ದೇವರ ಮಹಾಹೃದಯಕ್ಕೆ ಸೆಳೆಯಲ್ಪಡುತ್ತದೆ.

ದೈವೀಕ ಅನುಕಂಪದ ಅಲೆಯುಬ್ಬರವು (ಸಮುದ್ರದ ಅಲೆ) ಪಾಪಿಯ ಆತ್ಮಕ್ಕೆ ಹರಿಯುತ್ತದೆ, ಅಲ್ಲಿಂದ ಇತರರ ಆತ್ಮಗಳಿಗೆ ತಲುಪುತ್ತದೆ. ಯೇಸುಕ್ರಿಸ್ತನ ಸ್ವಂತ ಜೀವನದಲ್ಲಿ ತೋರಿಬಂದ ಸೌಮ್ಯ ಸ್ವಭಾವ ಮತ್ತು ಕಾರುಣ್ಯ ಆತನ ಕೃಪೆಯಲ್ಲಿ ಪಾಲುದಾರರಾಗುವವರ ಜೀವನದಲ್ಲೂ ಕಂಡುಬರುತ್ತವೆ"– ಎಲೆನ್ ಜಿ ವೈಟಮ್ಮನವರ ಕ್ರಿಸ್ಟ್ ಆಬ್ಜೆಕ್ಟ್ ಲೆಸೆನ್ಸ್, ಪುಟ 251.

## ಚರ್ಚಿಸಬೇಕಾದ ಪ್ರಶ್ನೆಗಳು

1. ಕ್ಷಮಿಸದೆ ಇರುವುದು "ಒಬ್ಬನು ವಿಷ ಕುಡಿದುಕೊಂಡು ಮತ್ತೊಬ್ಬನು ಸಾಯಬೇಕೆಂದು ನಿರೀಕ್ಷಿಸುವಂತೆ" ಎಂದು ಯಾರೋ ಹೇಳಿದ್ದಾರೆ. ಈ ಹೇಳಿಕೆಯು ಯಾವ ಅರ್ಥವನ್ನು ಕೊಡುತ್ತದೆ?

2. ಯೋಸೇಫನು ತನ್ನ ಗುರುತನ್ನು ಬಿಟ್ಟುಕೊಡುವ ಮೊದಲು ಅವನು ನಡೆಸಿದ ಎಲ್ಲಾ ಸುದೀರ್ಘ ವಿಚಾರಣೆಗಳ ಉದ್ದೇಶವೇನಾಗಿತ್ತು? ಇದು ಅವನಿಗೂ ಅವನ ಸೋದರರರಿಗೂ ಏನು ಮಾಡಿತು?

3. ಯೋಸೇಫನು ತನ್ನ ಅಣ್ಣಂದಿರ ಮೇಲೆ ಮಾಡಿದ ಕೆಲವು ಹಂಚಿಕೆಗಳಲ್ಲಿ ಅವನ ಮನೆವಾರ್ತೆಯವನೂ ಭಾಗಿಯಾಗಿದ್ದಾನೆ (ಉದಾ ಆದಿಕಾಂಡ 44:1–12) ಕ್ಷಮಾಪಣೆಯ ಅನುಭವವು ಅದನ್ನು ವೀಕ್ಷಿಸುತ್ತಿರುವವರ ಮೇಲೆ ಪರಿಣಾಮ ಬೀರುತ್ತದೆ?

4. ದೇವರು ಎಂದಿಗೂ ತನ್ನ ಮಕ್ಕಳನ್ನು ಬಲವಂತದಿಂದ ತನ್ನ ಇಷ್ಟದಂತೆ ಮುನ್ನಡೆಸುವುದಿಲ್ಲ. ಅವರು ತನ್ನಿಂದ ನಡೆಸಿಕೊಳ್ಳಲು ಮನಸ್ಸಿದ್ದರೆ ಅವರನ್ನು ನಡೆಸುತ್ತಾನೆ. "ಒಬ್ಬನು ಘಟನೆಗಳ ಅಂತ್ಯವನ್ನು ಆರಂಭದಿಂದ ಕಾಣುವುವನಾದರೆ ಮತ್ತು ಹೇಗೆ ದೇವರ ಮಹಿಮೆಯ ಉದ್ದೇಶಗಳನ್ನು ನಾವು ಆತನ ಸಹಕೆಲಸಗಾರರಾಗಿ ಹೇಗೆ ಪೂರೈಸುತ್ತೇವೆಯೆಂದು ಅರಿತುಕೊಳ್ಳುತ್ತೇವೆ" ಎಲೆನ್ ಜಿ ವೈಟಮ್ಮನವರ ಡಿಸೈರ್ ಆಫ್ ಏಜಸ್ ಪುಟ 224, 225. ಈ ಹೇಳಿಕೆಯನ್ನು ಧ್ಯಾನ ಮಾಡುವಾಗ ನಿಮ್ಮ ಸ್ವಂತ ಜೀವನದ ಬಗ್ಗೆ ಆಲೋಚಿಸಿರಿ.

   ಇದನ್ನು ಅರ್ಥಮಾಡಿಕೊಳ್ಳುವುದು ನಾವು ಶೋಧನೆಗಳಲ್ಲಿ ಬಿದ್ದು ಹೋರಾಟಗಳನ್ನು ಎದುರಿಸುತ್ತಿರುವಾಗ ಹೇಗೆ ಸಹಾಯ ಮಾಡುತ್ತದೆ?